SRUJANI

ISSN: 2583-3510

Indian Journal of Innovative Research and Development (SIJIRD)

Volume-1 (01), March-April 2022, Pp. 11-15
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in

# ತೇರದಾಳ ಸೀಮೆಯ ಜೈನ ಪರಂಪರೆ

**ವಿದ್ಯಾ ಪಾಟನಕರ**

ಸಂಶೋಧನಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ.

***Abstract:***

ಭಾರತ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮ ಒಂದು. ಜೈನ ಸಿದ್ಧಾಂತದ ಪ್ರಕಾರ ಈ ಧರ್ಮವನ್ನು ಯಾರು ಸ್ಥಾಪಿಸಿಲ್ಲ. ಇದು ಅನಾದಿ ಕಾಲದ ಧರ್ಮವಾಗಿದೆ. ವರ್ತಮಾನ ಕಾಲದ ಪ್ರಥಮ ತೀರ್ಥಂಕರನಾದ ವೃಷಭನಾಥರಿಂದ ಮೊದಲಗೊಂಡು ಅಜಿತನಾಥ, ಚಂದ್ರಪ್ರಭು, ಶಾಂತಿನಾಥ, 23ನೇ ತೀರ್ಥಂಕರನಾದ ಪಾರ್ಶನಾಥ ಹಾಗೂ 24ನೇ ತೀರ್ಥಂಕರನಾದ ಮಹಾವೀರರು ಈ ಧರ್ಮದಲ್ಲಿ ಹೆಚ್ಚು ಖ್ಯಾತಿಯನ್ನು ಪಡೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ತೇರದಾಳ ಸೀಮೆಯ ಜೈನ ಪರಂಪರೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

***Key Words:*** ಅಜಿತನಾಥ, ಅಹಿಂಸೆ, ಜೈನಧರ್ಮ, ತೇರದಾಳ, ದಿಗಂಬರ, ಶ್ವೇತಾಂಬರ, ಅಜೀವಿಕ, ಮಹಾವೀರ, ಸತ್ಯಶೋಧ.

**ಪೀಠಿಕೆ**

ಜೈನ ಧರ್ಮವು ವೈದಿಕ ಸಂಸ್ಕೃತಿಯ ಕ್ಲಿಷ್ಟತೆಯಿಂದ ಅತೀ ಹೆಚ್ಚು ಜನರನ್ನು ಪ್ರಭಾವಿಸತೊಡಗಿತು. ಜನರು ಆಧ್ಯಾತ್ಮಿಕವಾಗಿ ಮನಃಶಾಂತಿಗಾಗಿ ಹಾತೊರೆಯುವ ಸಂದರ್ಭದಲ್ಲಿ ಜೈನ ಧರ್ಮವು ಉಗಮಗೊಂಡಿತು. ಸತ್ಯ ಮತ್ತು ಅಹಿಂಸಾ ತತ್ವದ ಹಿನ್ನೆಲೆಯಲ್ಲಿ ಜೈನ ಧರ್ಮವು ಭಾರತದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿಕೊಂಡಿದೆ. ವೈದಿಕ ಧರ್ಮದಲ್ಲಿದ್ದ ಪುರೋಹಿಶಾಹಿ, ಪ್ರಾಣಿ ಹಿಂಸೆ, ಕಠಿಣವಾದ ಸಂಸ್ಕೃತ ಶ್ಲೋಕಗಳ ಪಠಣ, ಜಾತಿ ಪದ್ಧತಿ ಮುಂತಾದ ಕಾರಣಗಳಿಂದ ಜೈನ ಧರ್ಮವು ಅಸ್ತಿತ್ವಕ್ಕೆ ಬಂದಿತು. ಈ ಧರ್ಮದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪ್ರಮುಖ ಪಂಗಡಗಳ ಜೊತೆಗೆ ಅಜೀವಿಕ ಎನ್ನುವ ಮತ್ತೊಂದು ಪಂಗಡವಿದೆ. ಈ ಧರ್ಮದಲ್ಲಿ ವೃಷಭನಾಥ, ಅಜಿತನಾಥ, ಶಂಭನಾಥ, ಅಭಿನಂದನ, ಸಮತಿನಾಥ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರನಾಥ, ಪುಷ್ಪದಂತ, ಶೀತಲನಾಥ, ಶ್ರೇಯಾಂಸ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸೂವ್ರತ, ನಮಿನಾಥ, ನೇಮಿನಾಥ, ಪಾಶ್ವನಾಥ, ವರ್ಧಮಾನ ಈ 24 ತೀರ್ಥಂಕರು ಆಗಿಹೊಗಿದ್ದಾರೆ.

ಕ್ರಿ.ಶ. ಪೂರ್ವ 3000 ರ ವೇಳೆಯಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತನು ತನ್ನ ಕೊನೆಗಾಲದಲ್ಲಿ ದಕ್ಷಿಣ ಭಾರತವನ್ನು ಪ್ರವೇಶಿಸಿದ್ದ ಕಾಲದಲ್ಲಿ ಜೈನ ಧರ್ಮವು ಕರ್ನಾಟಕದ ಸಮೃದ್ಧ ನೆಲೆಯಾಗಿ ಪರಿಣಮಿಸಿತು. ಹಿಂದೆ ಕನ್ನಡ ನಾಡಿನಲ್ಲಿ ಗಂಗ ಮತ್ತು ಹೊಯ್ಸಳರ ರಾಜಮನೆತನಗಳು ಜೈನ ಧರ್ಮಕ್ಕೆ ವಿಶೇಷವಾಗಿ ಒಲಿದಿರುವುದನ್ನು ಕಾಣುತ್ತೇವೆ. ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರಂತಹ ಪ್ರಮುಖವಾದ ಅರಸು ಮನೆತನಗಳು ಜೈನ ಧರ್ಮವನ್ನು ಪುರಸ್ಕರಿಸಿದ್ದವು. ಕನ್ನಡ ನಾಡೆಲ್ಲವೂ ಜೈನಮಯವಾಗುತ್ತಿದ್ದಂತಹ ಕಾಲದಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮವೂ ಕೂಡಾ ಜೈನ ಧರ್ಮದ ಪ್ರಭಾವದಿಂದ ಹೊರತಾಗಿರಲಿಲ್ಲವೆಂಬುದಕ್ಕೆ ಈ ಪ್ರದೇಶದಲ್ಲಿ ಈಗಲೂ ಕಂಡು ಬರುವ ಜಿನಾಲಯವು ಜೈನ ಪರಂಪರೆಗೆ ಸಾಕ್ಷಿಯಾಗಿದೆ.

**ತೇರದಾಳದ ಪರಿಚಯ**

ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ 29 ಕಿ. ಮೀ. ದೂರದಲ್ಲಿರುವ ತೇರದಾಳ ಸಣ್ಣ ಗ್ರಾಮ. ಆಡಳಿತದ ದೃಷ್ಟಿಕೋನದಿಂದ ತೇರದಾಳ ಮತ್ತು ಸಾವಳಗಿ ಎಂಬುದಾಗಿ ಎರಡು ಹೋಬಳಿ ಕೇಂದ್ರಗಳಾಗಿ ವಿಭಾಗ

*Please cite this article as:* ವಿದ್ಯಾ ಪಾಟನಕರ. (2022). ತೇರದಾಳ ಸೀಮೇಯ ಜೈನ ಪರಂಪರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(1), 11–15.

ಮಾಡಲಾಗಿದೆ. ಪೂರ್ವದಲ್ಲಿ ಬಿಜಾಪುರ ಜಿಲ್ಲೆಯ ಭಾಗವಾಗಿದ್ದು 1997ರ ನಂತರ ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿತ್ತು. 1973 ರಲ್ಲಿ ಮೈಸೂರು ಮುನ್ಸಿಪಾಲಿಟಿ ಕಾಯ್ದೆಯನ್ವಯ ತೇರದಾಳ ಪಂಚಾಯತಿಯಿಂದ ಪುರಸಭೆಯಾಗಿ ಮಾರ್ಪಾಟಾಗಿ ಪ್ರಸ್ತುತ ಸಂದರ್ಭದಲ್ಲಿ ವಿಧಾನ ಸಭಾಕ್ಷೇತ್ರವಾಗಿದೆ ಹಾಗೂ 2019ರಲ್ಲಿ ತೇರದಾಳವನ್ನು ತಾಲೂಕು ಕೇಂದ್ರವಾಗಿ ಘೋಷಣೆ ಮಾಡಲಾಗಿದೆ. 2011 ರ ಜನಗಣತಿಯ ಆದಾರದ ಮೇಲೆ 26,153 ರಷ್ಟು ಜನಸಂಖ್ಯೆಯನ್ನು ಹೊಂದಿದೆ.

ತೇರದಾಳದ ಐತಿಹಾಸಿಕ ಹಿನ್ನಲೆಯನ್ನು ನೋಡಿದಾಗ ತೇರಿದಾಳ–12 ಈ ಪ್ರದೇಶವು ಹನ್ನೆರಡು ಗ್ರಾಮ (ಭೂಭಾಗ)ಗಳನ್ನು ಒಳಗೊಂಡ ಆಡಳಿತದ ಚಿಕ್ಕ ಘಟಕವಾಗಿದ್ದು, ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ಪ್ರದೇಶವಾಗಿದೆ. ಕೊಂಡಿನಾಡು 3000 ನಾಡಿನ ಹಲವು ಕಂಪಣಗಳಲ್ಲಿ ಒಂದಾದ ತೇರದಾಳ ಮಧ್ಯವರ್ತಿ ಸ್ಥಳವಾಗಿ ಆಡಳಿತದ ಕಾರ್ಯ ವೈಖರಿಯನ್ನು ಹೊತ್ತು ಮೆರೆದಂತೆ ಜೈನ ಧರ್ಮದ ಪ್ರಮುಖ ಕೇಂದ್ರವಾಗಿಯೂ ಮೆರೆಯಿತು. ಕ್ರಿ.ಶ. 1123ರ ಕಾಲದ ತೇರದಾಳ ಶಾಸನದ ಜಿನಸ್ತುತಿಯೊಂದಿಗೆ ಪ್ರಾರಂಭವಾಗುವುದು.

> *“ಶ್ರೀಮತ್ಪರಮ ಗಂಭೀರಸ್ಯಾದ್ವಾದಾಪೋಘ ಲಾಂಛನಂ ಜಿಯಾತ್ರೈ ಲೋಕ್ಯನಾಥಸ್ಯ ಶಾಸನಂ ಜಿನಾಶಾಸನಮ್॥ ಶ್ರೀ ಮನಮ್ನ, ಸುರಾಸುರೋರಗ ಲಸನ್ಮಾಣಿಕ್ಯ ಮೌಳಿ ಪ್ರಭಾಸ್ತೋಮಾಲಂಕೃತ ಪಾದಪದ್ಮಯುಗಳಂ ಕೈವಲ್ಯನ್ತಾಮನಃ ಪ್ರೇಮಂ ಸನ್ಮತಿ ನೇಮಿನಾಥ ಜಿನನಾಥಂ ತೇರಿದಾಳಾತಿಶಯ ಶ್ರೀಮತುಭವ್ಯಜ”*

ಈ ಶಾಸನಗಳಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳದ ಜನರು ಜಯಶಾಲಿಯಾಗಲಿ ಎಂದು ಹೇಳಿ ನೇಮಿನಾಥ ಹಾಗೂ ಜಿನೇಶ್ವರನ ಆಶೀರ್ವಾದಗಳನ್ನು ಕೋರಲಾಗಿದೆ.

ಈ ಶಾಸನವು ಕಲ್ಯಾಣಿ ಚಾಲುಕ್ಯ ಮತ್ತು ಯಾದವರ ಕಾಲಕ್ಕೆ ಸೇರಿದ್ದು. ಇದರಲ್ಲಿ ಮೂರು ಕಾಲಮಾನಗಳ ಉಲ್ಲೇಖವಿದೆ. ಶಾಸನದ ಪ್ರಾರಂಭದಲ್ಲಿ ತೇರಿದಾಳದ ಭವ್ಯಜನರಿಗೆ ನೇಮಿನಾಥನು ಮಂಗಳವನ್ನುಂಟು ಮಾಡಲಿ ಎಂದು ಹಾರೈಸಲಾಗಿದೆ. ಮುಂದೆ, ಕುಂತಳ, ಕುಂತಳದಲ್ಲಿದ್ದ ಕೊಂಡಿದೇಶ, ಅದರಲ್ಲಿದ್ದ ಮಾಧವ, ಸೂರ್ಯ, ಶಂಕರ, ಜಿನ ದೇವಾಲಯಗಳಿಂದ ಕಂಗೊಳಿಸುತ್ತಿದ್ದ ತೇರಿದಾಳ 12ರ ಬಗ್ಗೆ ಹೇಳಿ ತೇರದಾಳದ ವರ್ಣನೆಯಿಂದ ಚಾಲುಕ್ಯರ ವಂಶವನ್ನು ವಿಸ್ತಾರವಾಗಿ ವರ್ಣಿಸಲಾಗಿದೆ. ತೈಲನಿಂದ ಆರಂಭವಾದ ಈ ವಂಶದಲ್ಲಿ ಜಯಸಿಂಹ ಹುಟ್ಟಿದ, ಇವನ ಮಗ ತ್ರೈಲೋಕ್ಯಮಲ್ಲನಾದ ಅಹಮಲ್ಲ, ಇವನ ಮಗ ಪೆರ್ಮಾಡಿರಾಯ. ಇವನ ಸಾಮಂತ ಗೊಂಕಕ್ಷಿತಿಪ. ಇವನ ತಂದೆ ಮಲ್ಲಿದೇವ, ಇವನ ತಾಯಿ ಬಾಚಲದೇವಿ. ಗೊಂಕನ ಗುರು ಮಾಘಣನ್ದಿ ಸಿದ್ಧಾಂತ ಚಕ್ರವರ್ತಿ, ದೈವ ನೇಮಿನಾಥ, ಈ ಗೊಂಕರಾಜನು ತೇರಿದಾಳದಲ್ಲಿ ಜಿನಮಂದಿರವನ್ನು ಕಟ್ಟಿಸಿದನು. ಮಾಘಣಂದಿ ಮುನಿಯನ್ನು ಕೊಂಡಕುಂದಾನ್ವಯದವನೆಂದೂ, ದೇಸಿಗಣ ಪೊಸ್ತಕಗಚ್ಚದವನೆಂದು ವರ್ಣಿಸಲಾಗಿದೆ. ಇವನ ಶಿಷ್ಯರಾದ ಕನಕಣಂದಿ ಪಂಡಿತ, ಶ್ರುತಕೀರ್ತಿ ತ್ರೈವಿದ್ಯಬ್ರತಿ. ಚಂದ್ರಕೀರ್ತಿಪಂಡಿತ, ಪ್ರಭಾಚಂದ್ರಪಂಡಿತ, ಇತನ ಶಿಷ್ಯ ತ್ರೈವಿದ್ಯ ವಿದ್ಯಾಧರ. ಶಾಸನವು ಮುಂದೆ ಚಾಳುಕ್ಯ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಲತ್ತಲೂರ ಪುರವರಾಧೀಶವರನಾದ, ರಟ್ಟಕುಲಭೂಷಣನಾದ ಸುವರ್ಣ ಗರುಡಧ್ವಜ ಮುಂತಾದ ವಿಶೇಷಣಗಳಿಂದ ಪ್ರಖ್ಯಾತನಾದ ಮಹಾಮಂಡಲೇಶ್ವರನಾದ ಕಾರ್ತವೀರ್ಯದೇವನ್ನು ಉಲ್ಲೇಖಿಸುತ್ತದೆ. ಇವನ ಕಾಲದಲ್ಲಿ ಅವನ ಅನುಮತಿಯಂತೆ ಜೀಮೂತಾನ್ವಯನಾದ ಮಯೂರಪ್ರಿಂಚಧ್ವಜನಾದ ಪದ್ಮಾವತಿದೇವಿ ವರಪ್ರಸಾದಕನಾದ ಗೊಂಕದೇವನು ತನ್ನ ರಾಜಧಾನಿ ತೇರಿದಾಳದಲ್ಲಿ ಗೊಂಕಜಿನಾಲಯವನ್ನು ನಿರ್ಮಿಸಿ, ನೇಮಿಜಿನನನ್ನು ಪ್ರತಿಷ್ಠೆ ಮಾಡಿಸಿದನು.

**ದಾನ–ದತ್ತಿ**

ತೇರದಾಳ ಆಡಳಿತ ಘಟಕವನ್ನು ಕ್ರಿ.ಶ. 1125ರ ಹೊತ್ತಿಗೆ ಗೊಂಕದೇವ ಎಂಬ ಜೈನ ವ್ಯಕ್ತಿ ಆಳುತ್ತಿದ್ದ. ಈ ವ್ಯಕ್ತಿ ಪರಮಜಿನಭಕ್ತ, ಜೈನಧರ್ಮದ ತತ್ವ ಸಿದ್ಧಾಂತಗಳ ಮೇಲೆ ಅಪಾರ ನಂಬಿಕೆಯನ್ನಿಟ್ಟಿದ್ದ. ಇವನಿಗೆ ಒಮ್ಮೆ ಸರ್ಪ ಕಚ್ಚಿತು. ವಿಷಬಾಧೆಗೆ ಒಳಗಾದ ಗೊಂಕದೇವ ಮಂತ್ರ–ತಂತ್ರ ವಿದ್ಯೆಗಳ ಮೊರೆ ಹೋಗದೆ ಪರಮ ಪವಿತ್ರನೂ ಆದ ಜಿನನನ್ನು ನೆನೆಯುತ ‘ಪಂಚಪದ’ ವನ್ನು ಓದುತ, ಮನಸ್ಸನ್ನು ಸಂಪೂರ್ಣವಾಗಿ ಜಿನನಲ್ಲಿ ಕೇಂದ್ರಿಕರಿಸಿದರೆ ತನಗೇ ಏರಿದ ವಿಷ ಹೋಗುತ್ತದೆ ಎಂಬುದು ಗೊಂಕರಸನಿಗೆ ಗೊತ್ತಿತ್ತು. ಮೇಲಾಗಿ ಮನುಷ್ಯನ ಮನಸ್ಸು ದೃಢವಾಗಿದ್ದಲ್ಲಿ ಎಂಥ ಘನಘೋರ ವಿಷದಿಂದಲೂ ಪಾರಾಗಬಹುದು. ಇದಕ್ಕೆ ಗೊಂಕರಸ ಒಂದು ನಿದರ್ಶನ.

> *ಪಸಿದಸಿತಾಹಿ ಸೋಂಕಿದೊಡೆ ಸಂಕಿಸಿ ಮಂತ್ರದ ತಂತ್ರದಾಸೆಯಿಂ*
> *ದಸುವರೆಯಾಗಿ ಬಿರ್ದ್ದಿರದೆ ಪಂಚಪದಂಗಳನೋದಿ ತದ್ವಿಶ*
> *ಪ್ರಸರಮನೆಯ್ದೆ ಪಿಂಗಿಸಿ ಜಿನಬ್ರತದೊಳು ದ್ರಿಡನಾದ ತಂನಪೆಂ*
> *ಪೆಂಪೆಸೆದಿರೆ ತೇರಿದಾಳದರಸಂ ನೆಗಳ್ದಂ ಕಲಿ ಗೊಂಕಭೂಭುಜನು।*

ಪಂಚಪದಗಳ ಓದು, ಜಿನಸ್ಮರಣೆಯಿಂದ ಮರುಜನ್ಮ ಪಡೆದ ಗೊಂಕದೇವ ತೇರದಾಳದಲ್ಲಿ ಒಂದು ನೇಮಿನಾತ ಜಿನಾಲಯವನ್ನು ಕಟ್ಟಿಸಿದ. ಗೊಂಕದೇವ ಕಟ್ಟಿಸಿದ ನೇಮಿನಾಥ ಜಿನಾಲಯವು ‘ಗೊಂಕ ಜಿನಾಲಯ’ವೆಂದೇ ಪ್ರಸಿದ್ಧಿ ಪಡೆಯಿತು. ಗೊಂಕದೇವನ ಪ್ರತಿಷ್ಠೆ ಎಷ್ಟಿತೆಂದರೆ ಬಸಿದಿಯ ಮೂರ್ತಿಯ ಪ್ರತಿಷ್ಠಾಪನ ದಿನದಂದು ಮಹಾ ಮಂಡಳೇಶ್ವರನಾದ ರಟ್ಟರಾಜ ಕಾರ್ತವೀರ್ಯದೇವನೆ ಬಂದಿದ್ದ. ಅಲ್ಲದೇ ಈ ಸಂದರ್ಭದಲ್ಲಿ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಚಾರ್ಯರಾದ ಶ್ರೀ ಮಾಘಣಂದಿ ಸೈದ್ಧಾಂತಿಕ ದೇವರನ್ನು ಕರೆಸಿ, ಬಸದಿಯ ರಿಸಿಯರಹಾರ ದಾನಕ್ಕೆ, ದೇವರ ಪೂಜೆ ಮುಂತಾದವುಗಳ ಜೀರ್ಣೋದ್ಧಾರಕ್ಕೆಂದು ಮುನಿಯ ಕಾಲನ್ನು ತೊಳೆದು ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.

> *ಶ್ರೀಮತು ಗೊಂಕದೇವರಸರು ನಿಜರಾಜಧಾನಿಯಪ್ಪ ತೇರಿದಾಳದ ಮಧ್ಯಪ್ರದೇಶದೊಳು ಗೊಂಕಜಿನಾಲಯಮಂ ನಿರ್ಮ್ಮಿಸಿ ಶ್ರೀನೇಮಿಜಿನನಾತ ಪ್ರತಿಷ್ಠೆಯಂ ರಾಷ್ಟ್ರಕೂಟಾನ್ವಯ ಶಿರಶಿಖಾಮಣಿ ಕಾರ್ತ್ತಿವೀರ್ಯ್ಯದೊಳು ಮಹಾಮಣ್ಡಳೇಶ್ವರಂ ಮುಖ್ಯವಾಗಿ ಸದ್ಭಕ್ತಿಯಿಂ ಶುಭದಿನ ಮಹೊರ್ತ್ತದೊಳು ಮಾಡಿ ತಜ್ಜಿನ ಮುನಿಪ್ರಧಾನರಪ್ಪದೇಸಿಗಗಣ ಪೊಸ್ತಕ*

*ಗಚ್ಚದ ಶ್ರೀ ಕೊಣ್ಡಕುನ್ದಾಚಾರ್ಯ್ಯಾನ್ವಯದ ಕೊಲ್ಲಾಪುರದ ಶ್ರೀರೂಪನಾರಾಯಣನ ಬಸದಿಯಾಚಾರ್ಯ್ಯರು ಮಣ್ಡಳಾಚಾರ್ಯ್ಯರುಮೆನಿಪ್ಪ ಶ್ರೀ ಮಾಘಣಂದಿ ಸೈದ್ಧಾನ್ತಿಕ ದೇವರ ಬಸಿರ ಸಕವರ್ಷ 1045ನೇಯ ಶುಭಕ್ರಿತ್ಸಂವತ್ಸರದ ವೈಶಾಖದ ಪುಣ್ಣಮಿ ಬ್ರಹಸ್ಪತಿವಾರದಲು ಗೊಂಕಜಿನಾಲಯಕ್ಕೆ.*

ಗೊಂಕದೇವ ಕಟ್ಟಿಸಿದ ಈ ಜಿನಾಲಯಕ್ಕೆ ಅಪಾರ ಪ್ರಮಾಣದ ದಾನದತ್ತಿಗಳು ಹರಿದು ಬಂದಿವೆ. ಎಪ್ಪತ್ತೆರಡು ಮತ್ತರು ಭೂಮಿಯನ್ನು ಹಾಗೂ ಒಂದು ಮತ್ತರು ತೋಟವನ್ನು ದಾನ ಮಾಡಿದನು. ಅದು ಅಲ್ಲದೆ ಅಲ್ಲಿಯ ಗೌಡರು ಮತ್ತು ರೈತರು ಕೂಡಿ ದೇವರಿಗೆ ಎಲ್ಲ ದವಸ ಧಾನ್ಯಗಳ ರಾಶಿಗೊಳಗವನ್ನು, ಕೆಲವು ಆದಾಯವನ್ನು, ತಲ್ಲಗರು ನಂದಾದೀವಿಗೆಗೆ ಎಣ್ಣೆಯನ್ನು, ಕುಂಬಾರರು ಮಡಿಕೆಗಳನ್ನು ಮತ್ತು ಗಾತ್ರಿಗಳು ವೀಳ್ಯೆದೆಲೆಗಳನ್ನು ಕೊಟ್ಟರೆಂದು ಉಲ್ಲೇಖವಾಗಿದೆ.

ಕ್ರಿ.ಶ. 1141ರ ಶಾಸನವು ಪ್ರಸಿದ್ಧವಾದ ವ್ಯಾಪಾರಿ ಸಂಘವಾದ ಅಯ್ಯಾವೊಳೆ ಐಯ್ಯೂರು ಸಂಘದ ಸದಸ್ಯರು ನಾಮಾ ದೇಶ್ಯಾಭ್ಯನ್ತರದ ಗವರಿ ಗೌತ್ರಿಗರು, ಸೆಟ್ಟಿಯರು, ಸೆಟ್ಟಿಗುತ್ತರು, ಮಹಾನಾಡಾಗಿ ತೇರದಾಳದಲ್ಲಿ ಮಹಾಸಭೆ ಮಾಡಿ ಗೊಂಕ ಅರಸರು ಕಟ್ಟಿಸಿದ ನೇಮಿನಾಥ ಬಸದಿಯನ್ನು ನೋಡಿ ಆನಂದಭರಿತವಾಗಿ ನಮಸ್ಕರಿಸಿ ದೇವಾಲಯಗಳಲ್ಲಿ ನಿರಂತರವಾಗಿ ಅಷ್ಟವಿದ್ಯಾರ್ಚನೆ ವಿಧಾನಗಳು ನಡೆಯುವುದಗೊಸ್ಕರವಾಗಿಯೇ ಒಂದು ನೂರಾ ಇಪ್ಪತ್ತು ಎತ್ತು, ಕತ್ತೆ, ಕೋಣ, ದೋಣಿ ಮತ್ತು ಘಟ್ಟ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಉಪಯೋಗಿಸುವ ಸಾಧವಗಳು ಇವುಗಳ ಜೊತೆಗೆ ಸಾಗಿಸುವ ಸರಕುಗಳ ಮೇಲೆ ವಿಧಿಸಲಾಗುವ ಸುಂಕ ಪರಿಹಾರವನ್ನು ದೇವರಿಗೆ ಬಿಟ್ಟ ವಿಷಯ ಶಾಸನದಿಂದ ತಿಳಿದು ಬರುತ್ತದೆ.

*"ಶ್ರೀ ಮದಯ್ಯಾವಳೆಯಯ್ಯೂರ್ವ್ವಸ್ವಾಮಿಗಳು ಕುನ್ತಳ ವಿಷಯದೊಳು*
*ಶ್ರೀ ಮನ್ಮಂಡಳಿಕಂ ಗೊಂಕದೇವರಸಂ ಮಾಡಿಸಿದ"*
*ನೇಮಿತೀರ್ಥ್ಥೇಶ್ವರನ ಚೈತ್ಯಾಲಯಮಂ ಕಂಡು ಬಲಗೊಂಡು ಪೊಡವಟ್ಟು ಹರ್ಷಚಿತ್ತರಾಗಿ*
*ದೇವರಷ್ಟವಿಧಾರ್ಚ್ಚನೆ ಚಂದ್ರಾರ್ಕ್ಕ ತಾರಂಬರಂ ನಡೆವಂತಾ*
*"ಗಿ ಕೊಟ್ಟ ಶಾಸನ ಮರ್ಯ್ಯಾದೆ ಯೆನ್ತೆಂದಡ ಚತುಸ್ಸಮುದ್ರ ಪರ್ಯ್ಯನ್ತಂಬರಂ*
*ನಡವನ್ತಾಗಿ 120 ನೊಭಿಪ್ಪತ್ತೆತ್ತು ಕತ್ತೆ, ಕೋಣ, ಭಂಡಿ, ಭೈತ್ರ, ದೋಣಿ ದುರ್ಗ್ಗಗಳ*
*ಪಥಮೆಂಬಿವಭೋಳು ಆನೆ ಮಾಣಿಕ ವಸ್ತುವೇನಾದಡಂ ಪೇಟಿ ಜಳಸ್ಥಳ ಯಾ"*
*"ತ್ರೆಯಲು ನಡೆವಡಂ ಸುಂ ಪರಿಹಾರವಗಿ ಕೊಟ್ಟರು ಮತ್ತಂ ಶಾಸನ ಪರಿಹಾರಿಗರೆನ್ನದೆ*
*ವಕ್ಕಲಲೊನ್ದು ಪಣವಂ ಬಿಟ್ಟರು"*

ಕ್ರಿ.ಶ. 1187ರಲ್ಲಿರುವ ಶಾಸನದಲ್ಲಿ ಗೊಂಕ ಜಿನಾಲಯಕ್ಕೆ ದಾನ ದತ್ತಿಗಳನ್ನು ನೀಡುತ್ತಿರುವ ಕುರಿತು ಉಲ್ಲೇಖವಿದೆ. ಸೇವುಣ ಅಥವಾ ಯಾದವ ಅರಸ ಸಿಂಘಣನ ಸೇನಾನಿಯಾಗಿದ್ದ ತೇಜುಗಿ ಮತ್ತು ಅವನ ಮಗ ಭಾಯಿದೇವರು ಕುಂತಳ ಮಹೀವಲ್ಲಭ ಕಲ್ಯಾಣದ ಚಾಲುಕ್ಯ ನಾಲ್ಕನೇಯ ಸೋಮೆಶ್ವರನಿಂದ ಕೊಂಡಿನಾಡನ್ನು ಪಡೆದು ಅದನ್ನು ಆಳುತ್ತಿದ್ದರು. ಆಗ ತೇರದಾಳದ ಗೊಂಕ ಜಿನಾಲಯ ನೇಮಿತೀರ್ಥೇಶ್ವರ ದೇವರಿಗೆ ಕ್ರಿ. ಶ. 1123ರ ಶಾಸನಗಳಲ್ಲಿ ಗೊಂಕರಸನು ಬಿಟ್ಟಿದ್ದ ಭೂಮಿಯನ್ನು ಪುನರ್‌ದತ್ತಿ ಮಾಡಿದುದ್ದೇ ಅಲ್ಲದೇ ಮುನಿಗಳ ಅಹಾರಕ್ಕೆ ಬಸದಿಯ ಜೀರ್ಣೋದ್ಧಾರಕ್ಕಾಗಿ ಮೂವತ್ತಾರು ಮತ್ತರ ಭೂಮಿಯನ್ನು ಹಾಗೂ ದೇವಲಯಕ್ಕೆ ಒಂದು ನಿವೇಶನವನ್ನು ಬಿಟ್ಟ ವಿಷಯವನ್ನು ಕುರಿತು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ ಅರಸು, ಮನ್ನೆಯರು, ಅಧಿಕಾರಿಗಳು, ವ್ಯಾಪಾರಸ್ಥರು ಮತ್ತು ಸಮಸ್ತ ಪರಿವಾರದವರು ನೀಡಿದ ದಾನ ದತ್ತಿಗಳನ್ನು ನೋಡಿದರೆ ಅವರ ಪರಧರ್ಮ ಸಹಿಷ್ಣುತೆ, ಭಕ್ತಿ ಮತ್ತು ನಂಬಿಕೆ ಹಾಗೂ ಜಿನ ಧರ್ಮದಲ್ಲಿ ಅವರಿಗಿದ್ದ ಆಸಕ್ತಿ ಅರ್ಥವಾಗುತ್ತದೆ.

ನೇಮಿನಾಥ ಪ್ರತಿಮೆಯ ಪೀಠದ ಮೇಲೆ ಬರೆದಿರುವ ಶಾಸನದಲ್ಲಿ ಜಿನಮೂರ್ತಿ ಪ್ರತಿಷ್ಠಾಪಿಸಿದ ದಾಖಲಿದೆ.

*ಶ್ರೀಮನ್ನೇಮಿಜಿನೇಂದ್ರನ ಪ್ರತಿಮೆಯಂ ಸಮ್ಯಕ್ತ್ವ ಚೂಡಾಮಣಿಗಳಾದಂ*
*ಥಾ ಶ್ರೀಮತ್ತೇರಿದಳದ ದೇಶಾಯಿ ಸತ್ತ್ಯೆವ್ವ ತತ್ಪುತ್ರ ಜಕ್ಕಪ್ಪ ಸಹವಾಗಿ*
*ಮಾಡಿಸಿ ಶ್ರೀ ಗೊಂಕಜಿನಾಲಯದಲ್ಲಿ ಪ್ರತಿಷ್ಠೆಯನು ಮಾಡಿದ ಶ*
*ಕವರ್ಷ । 1770 ವಿಭವನಾಮ ಸಮವತ್ಸರದ ಮಾರ್ಗ್ಗಶಿರದ*
*ಶುಕ್ಲ ದಶಮಿ ಶುಕ್ರವಾರದಲ್ಲಿ ಭದ್ರಂ ಭೂಯಾತ್ ಶ್ರೀಶ್ರೀಶ್ರೀ*

ಈ ಶಾಸನದಲ್ಲಿ ಕಾಲವನ್ನು ಶಕವರ್ಷ 1770 ವಿಭವ ಮಾರ್ಗಶಿರ ಶುದ್ಧಶಮಿ ಎಂಬುದು ಹಾಗೂ ತೇರದಾಳ ದೇಸಾಯಿ ಸತ್ಯವ್ವ ಮತ್ತು ಆಕೆಯ ಮಗನಾದ ಜಕ್ಕಪ್ಪ ಸೇರಿ ಗೊಂಕ ಜಿನಾಲಯದಲ್ಲಿ ನೇಮಿನಾಥಸ್ವಾಮಿ ತೀರ್ಥಂಕರನ ಪ್ರತಿಷ್ಠೆಯನ್ನು ತಿಳಿಸುತ್ತದೆ. ಈ ರೀತಿಯಾಗಿ ತೇರದಾಳ ಮತ್ತು ಅದರ ಸುತ್ತಲಿನ ಪರಿಸರದಲ್ಲಿ ಜೈನ ಧರ್ಮ ಬೆಳೆದು ಬಂದ ಪರಂಪರೆಯನ್ನು ತಿಳಿಯಬಹುದಾಗಿದೆ.

**ಜೈನ ಗುರು ಪರಂಪರೆ**

ಪ್ರಾಚೀನ ತೇರದಾಳ ಪ್ರದೇಶದಲ್ಲಿ ನೇಮಿನಾಥೇಶ್ವರ ವ್ಯವಸ್ಥಿತ ರೂಪದಲ್ಲಿ ಬಸದಿಗಳು ಕಂಡು ಬರುವಂತೆಯೇ ಸನ್ಯಾಸಿಗಳು ಕೂಡಾ ಈ ಪ್ರದೇಶದಲ್ಲಿ ಬಾಳಿದರು ಎಂಬ ಶಾಸನಾಧಾರಿತ ಜೀವಂತ ನಿದರ್ಶನಗಳುಂಟಾಗಿವೆ. ಉದಾ: ಕಲ್ಯಾಣ ಚಾಲುಕ್ಯರ ದೊರೆ ಆರನೇಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1123ರ ಶಾಸನವು ಜೈನ ಗುರು ಪರಂಪರೆಯನ್ನು ಕುರಿತು ಉಲ್ಲೇಖಿಸುತ್ತದೆ. ಶ್ರೀ ಮಾಘನಂದಿ ಸೈದ್ಧಾಂತಿಕ ದೇವರು ಕೊಲ್ಲಾಪುರದ ಶ್ರೀ ರೂಪನಾರಾಯಣ ಬಸದಿಯ ಆಚಾರ್ಯರೂ, ಮಂಡಳಚಾರ್ಯರೂ ಆಗಿದ್ದರಲ್ಲದೇ ಪ್ರಸಿದ್ಧ ನಿಂಬ ಸಾಮಂತನ ಗುರುಗಳಾಗಿದ್ದರು. ಸಾಮಂತರ ನಿಂಬದೇವರು ರೂಪನಾರಾಯಣ ಬಸದಿಯನ್ನು ಕಟ್ಟಿಸಿದನು. 'ಪುಸ್ತಕಗ್ಛ ದೇಶಿಯಗುಣ ಕೊನ್ವ ಕುನ್ತಾನ್ವಯಕ್ಕೆ' ಸೇರಿದ ಇವರಿಗೆ ಅನೇಕ ಪ್ರಖ್ಯಾತ ಪಂಡಿತರು ಶಿಷ್ಯರಾಗಿದ್ದರು. ಪರವಾದೀಭ ಪಂಚಾನನನೆನಿಸಿದ ಕನಕನಂದಿ ಪಂಡಿತ ಪರವಾದಿಶಿಖರಿ ಶಿಖರನಿರ್ಬ್ಬೆದ ಗೋಚಣ ಪಂಡಿತರೆನಿಸಿದ ಶೃತಕೀರ್ತಿತ್ರೈವಿದ್ಯ, ಪರವಾದಿಮಸ್ತಕಶೂಲ ಚಂದ್ರಕೀರ್ತಿ ಪಂಡಿತ, ಉಜ್ವಳಕೀರ್ತಿ

ಮೂರ್ತಿ ಪಂಡಿತ, ಪ್ರಭಾಚಂದ್ರ ಪಂಡಿತ, ವರ್ಧಮಾನ ತ್ರೈವಿದ್ಯ ವಿದ್ಯಾಧರ ಇವರು ಶ್ರೇಷ್ಠ ಮುನಿಗಳಾಗಿದ್ದು ಇವರ ಶಿಷ್ಯರಲ್ಲಿ ಕೊನೆಯವರು ಶ್ರೀ ವರ್ಧಮಾನ ತ್ರೈವಿದ್ಯ ವಿದ್ಯಾದರ ವಸುದೈಕ ಭಾಮಧವ ಜಿನೇದ್ರಾಧೀಶ್ವರರಾಗಿದ್ದರೆಂದು ಈ ವಸುವೈಕ ಬಾಂಧವ್ಯ ಜಿನಾಲಯಲೊಕ್ಕಿಯ ಉಲ್ಲೇಖದಲ್ಲಿ ಕಾಣಬಹುದು.

ಜೈನ ಧರ್ಮವು ಈ ನಾಡಿನಲ್ಲಿ ಪ್ರಭಾವಿ ಧರ್ಮವಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಇದೇ ಗ್ರಾಮದ ಕ್ರಿ.ಶ. 1181ರ ಶಾಸನದಲ್ಲಿ ತಿಳಿಸಿರುವಂತೆ ನೇಮಿತೀರ್ಥೇಶ್ವರ ಜಿನಾಲಯ ಈ ಹಿಂದೆ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಡಳಿತ ಕಕ್ಷೆಯಲ್ಲಿತ್ತು. ಅದರೆ ಆ ಊರಿನ ಸಮಸ್ತ ನಖರರುಗಳ ಪ್ರಾರ್ಥನೆಯಂತೆ, ಕೊಲ್ಲಾಪೂರದ ಘಟಿಕಾಸ್ಥಾನದ ಆಚಾರ್ಯರು ಮತ್ತು ಏಳ್ಕೋಟಿ ಸಂಖ್ಯಾ ತಗಣಂಗಳ ಒಂದೂಗೂಡಿ ಆ ಜಿನಾಲಯವನ್ನು ಅದೇ ಊರಿನ ಕಲಿದೇವ ದೇವಾಲಯಕ್ಕೆ ಪ್ರತಿಬದ್ಧ ಮಾಡಿದರು. ಇದಕ್ಕೆ ಕಾರಣ ಆ ಶಾಸನದ ಕೊನೆಯ ವಾಕ್ಯಗಳಿಂದ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ.

*"ಬಸದಿಯ ಮೇಲೆ ಸೂದ್ರಕನ ಸಿಂಹದ*
*ಚಕ್ರದ ಚಿಹ್ನೆಮೆವಿಂಬಿನ ತಿಸುಳದ ಘಂಟೆ*
*ಯಂ ಪಳೆಯನಾಗದೆನಿಪ್ಪವನೇಳುಕೋಟಿ ತಾಪಸರ್ಗೆ*
*ಮಹಾವಿರೋಧಿಯವನೀಶ್ವರ ವೈರಿ"*

ಅಂದು ನಡೆಯುತ್ತಿದ್ದ ಧಾರ್ಮಿಕ ಆಂದೋಲನದ ಚಿತ್ರಣವನ್ನು ನೀಡುತ್ತದೆ. ಅಂತಹ ದುರ್ಘಟನೆ ತೇರದಾಳದ ಬಸದಿಯಲ್ಲಿ ಆಗಬಾರದೆಂಬ ಉದ್ದೇಶದಿಂದ ಶೈವ ರಕ್ಷೆಯ ಬೇಡಿದ ಒಂದು ಸಂದರ್ಭವನ್ನು ನಿರೂಪಿಸುವ ಈ ಶಾಸನ ಅತ್ಯಂತ ಮಹತ್ವವಾಗಿ ಕಂಡುಬರುತ್ತದೆ.

**ಜೈನ ಧರ್ಮದ ತತ್ವ ಮತ್ತು ವ್ರತಗಳು**

ಆತ್ಮವು ಸಹಜ ಶುದ್ಧತೆಯನ್ನು ಮರಳಿ ಪಡೆದುಕೊಂಡು ಕೇವಲ ಜ್ಞಾನವನ್ನು ಪಡೆಯುವುದೆ ಜೀವನದ ಪ್ರಮುಖ ಗುರಿ, ಇದೊಂದು ಅಲೌಕಿಕ ಸ್ಥಿತಿ. ಆತ್ಮವು ಕೇವಲ ಅನಂತ ಜ್ಞಾನ ಮಾತ್ರವಲ್ಲ. ಇದು ಅನಂತ ಶಾಂತಿ, ಅನಂತ ಶಕ್ತಿಯಿಂದ ಒಳಗೂಡಿದ ಎಲ್ಲ ಪೂರ್ಣತೆಯನ್ನು ಹೊಂದಿರುತ್ತದೆ. ಉಪನಿಷತ್ತಿನ ಬೋಧನೆ ಪ್ರಕಾರ ಪಾಪ ಪುಣ್ಯಗಳೆರಡನ್ನು ಮಿರಿ ನಿಲ್ಲುವುದೆ ಮೋಕ್ಷ ಹೊಂದಲಿಕೆ ಅಹಿಂಸೆ, ಸತ್ಯ, ಆಸ್ತೆಯ, ಬ್ರಹ್ಮಚರ್ಯ ಅಪರಿಗ್ರಹ, ಇವು ಮಹಾವೃತಗಳು ಹಾಗೂ ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ ಚಾರಿತ್ರ, ಇವು ತ್ರಿರತ್ನಗಳಾಗಿ ಇವುಗಳ ಪೋಷಕಗಳಾಗಿ ಬಂದಾಗ ಜೈನ ಧರ್ಮದಲ್ಲಿ ಮೋಕ್ಷ ಪ್ರಾಪ್ತಿಯಾಗುತ್ತದೆ.

ಸಾಮಾನ್ಯವಾಗಿ ದೇಶದ ಎಲ್ಲಾ ಕಡೆಗಳಲ್ಲಿರುವಂತೆ ತೇರದಾಳ ಪರಿಸರದ ಜಿನ ಧರ್ಮಿಯವರು ಸಲ್ಲೇಖನ ವ್ರತ ಹೆಚ್ಚು ಮಹತ್ವದಾಗಿದ್ದು ಇವರು ಇಚ್ಛಾ ಮರಣವನ್ನು ಸಮಾದಿ ಮರಣ, ಸಲ್ಲೇಕನ ವ್ರತ ಪಂಡಿತ ಮರಣ ಎನ್ನುತ್ತಾರೆ. ಪ್ರಾಚೀನ ಕರ್ನಾಟಕದಲ್ಲಿ ಸಮಾದಿ ಮರಣ ಜೈನರ ಆದರ್ಶ ಮರಣವಾಗಿದೆ. ಭದ್ರಗಿರಿಯ ಪೂಜ್ಯ ಪಾದರಾದ ಶ್ರೀ ಶ್ರೀ ಶ್ರೀ 108 ಕುಲರತ್ನ ಭೂಷಣ ಮಹಾರಾಜರು ದೃಷ್ಟಾಂತವೊಂದನ್ನು ನೀಡುತ್ತಾರೆ. ಮುತ್ತು ರತ್ನ ತುಂಬಿದ ಮನೆಗೆ ಬೆಂಕಿಬದ್ದರೆ ಅದನ್ನು ನಂದಿಸಲು ಮೊದಲು ಪ್ರಯತ್ನ ಪಡುತ್ತವೆ. ಅದು ಅಸಾಧ್ಯವಾದರೆ ಮುತ್ತು ರತ್ನವನ್ನು ಉಳಿಸಿಕೊಳ್ಳಲು ಅನ್ಯ ಮಾರ್ಗದಲ್ಲಿ ಮನೆಯನ್ನು ಕೆಡವಿಯಾದರು ಮುತ್ತು ರತ್ನವನ್ನು ರಕ್ಷಿಸಿಕೊಳ್ಳುತ್ತೆವೆ.(ಮನೆ–ಶರೀರ) ಭೂಮಿಯ ಮೇಲೆ ಎಲ್ಲದಕ್ಕೂ ಕೊನೆ ಇರುವಾಗ ಉಪವಾಸ ಮಾಡಿ, ಹರಕೆ ಹೊತ್ತು, ನೀರಿನಲ್ಲಿ ಮುಳಗಿ ಸಾಯುವುದು, ಮುಂತಾದವು ಮಾಡಿದ ಕರ್ಮಗಳ ಕುರಿತು ಯೊಚಿಸಿ ಪಶ್ಚಾತಾಮ ಮಾಡಿಕೊಂಡು ಸಾಯುವುದಕ್ಕಿಂತ ವೈರಾಗ್ಯ ತಾಳಿ ಸಲ್ಲೇಖನ ಸ್ವಿಕರಿಸಿ ಪ್ರೀತಿ, ವೈರತ್ವ ತ್ಯಜಿಸಿ, ಆಹರ ತ್ಯಜಿಸಿ, ದೇವರನ್ನು ಜ್ಞಾನಿಸುತ್ತ, ಜೈನ ಧರ್ಮದ ಸಿದ್ಧಾಂತಗಳಾದ ಪಂಚ ಪರಮೇಷ್ಠಿಗಳದ : ಣಮೋ ಅರಿಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯಿರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸವ್ವ ಸಾಹೂಣಂ ಎಂದು ಪಠನೆ ಮಾಡುತ್ತಾ ತಮಗೆ ಉತ್ತಮ ಸದ್ಗತಿ ಹಾಗು ಪರಮಗತಿ (ಮೋಕ್ಷ) ದೊರೆಯಲೆಂದು ಪಂಚ ಪರಮೇಷ್ಠಿಗಳನ್ನು ಆರಾಧಿಸುತ್ತಾ ದೇಹದಲ್ಲಿರುವ ಪ್ರಾಣವನ್ನು ತ್ಯಾಗಮಾಡುವುದು. ಸಲ್ಲೇಖನ ವ್ರತದಲ್ಲಿ ಬರುವ ಸಂಕಷ್ಟಗಳನ್ನು ಸ್ವ ಸಂತೋಷದಿಂದ ಸಹಿಸಿಕೊಳ್ಳಲು ಸದಾ ಸಿದ್ಧರಾಗಿರಬೇಕು. ಈ ವ್ರತಾಚರಣೆ ಕೆನ್ನಾಲಿಗೆಯಂತೆ, "ಆಯುಧದ ಕತ್ತಿಯ ಅಗಲವಿದ್ದಂತೆ, ವಿಷ ಜಂತುವಿನ ಹಲ್ಲಿನಂತೆ ಕಠಿಣವಾದದ್ದು" ವೆಂದು ತಿಳಿದು "ದೇಹ ನಶ್ವರ" ನೆಂದು ಅರಿತು ದೇಹದ ಮೇಲಿನ ಮಮತತ್ವ ತೊರೆದು ಇಂದ್ರಿಯ ಹಾಗೂ ಪ್ರಾಣಿ ಸಂಯಮದಿಂದ ಸಹಿಸಲು ಶಕ್ತವಾಗಿರಬೇಕು.

ಕವಿ ಚಕ್ರವರ್ತಿ ಜನ್ನನ ಪ್ರಕಾರ ಪೆತ್ತ ಪರೀಷಹ ಜಯಮೆ ತಪಂ ತಪಕೆ ಕೋಡೆರಡೊಳವೇ_ ಅಂದರೆ ಭವದ ಸಂಕಷ್ಟಗಳನ್ನು ತಾಳ್ಮೆಯಿಂದ ಜಯಿಸುವುದೇ ತಪಸುವುದೇ ತಪಸ್ಸು. ಶಾಸನವೊಂದರ ಪ್ರಕಾರ "ತಪಸಾ ಸರ್ವಂ ಸುಖಂ ಪ್ರಾಪ್ಯತೇ" ತಪಸ್ಸಿನಿಂದಲೇ ಸರ್ವ ಸುಖಗಳು. ತಪಸ್ಸು ಎಂದರೆ ತನನ್ನು ತಾನು ಅರಿಷಡ್ವರ್ಗಗಳಿಂದ ಜಯಿಸುವುದೆಂದರ್ಥ. ಜೈನ ಧರ್ಮದಲ್ಲಿ ಜೀವನವೆಂಬುದನ್ನು ಕುರಿತು ಪೂಜ್ಯಪಾದರಾದ ಶ್ರೀ ಶ್ರೀ ಶ್ರೀ 108 ಕುಲರತ್ನ ಭೂಷಣ ಮಹಾರಾಜರು ಸಂಸಾರವು ಕ್ಷಣಿಕ ಆತ್ಮ ಶಾಶ್ವತ. ಹೇಗೆ ಹಾಲು ನೀರು ಬೇರೆ ಬೇರೆಯೋ ಹಾಗೆಯೇ ಆತ್ಮ ಮತ್ತು ದೇಹ ಭಿನ್ನ ಭಿನ್ನವಾಗಿವೆ. ಸುಟ್ಟ ಮಣ್ಣಿನ ಮಡಿಕೆಯ ತರ, ಕಾಮನ ಬಿಲ್ಲಿನಂತೆ, ಮಳೆಯ ಬರುವ ಸಂದರ್ಭದಲ್ಲಿ ಕಾಣಿಸುವ ಪ್ರಕಾಶಮಾನವಾದ ಮಿಂಚಿನಂತೆ, ಮಂಜಿನಂತೆ, ಸುಂದರವಾದದ್ದು, ಆದರೆ ಸುಟ್ಟ ಮಣ್ಣಿನ ಮಡಿಕೆ ಕೈಯಿಂದ ಜಾರಿ ಬಿದ್ದರೆ ಪುನಃ ಜೋಡಿಸಲು ಅಸಾಧ್ಯ. ಜೀವನ ಸುಂದರವದರೂ ಕ್ಷಣಿಕವಾದದು. ಸಾವು ಎಂಬುದು ದೈವಿ ಸಂಕಲ್ಪದಿಂದ ಕೂಡಿದೆ.

**ಉಪಸಂಹಾರ**

ಈ ಹಿನ್ನಲೆಯಲ್ಲಿ ಜೈನ ಧರ್ಮದಲ್ಲಿ ಮುನಿಗಳು, ಸಂಸಾರಿಗಳಾದ ಪುರುಷರೂ, ಸ್ತ್ರೀಯರು ಸಹ ಸ್ವ ಇಚ್ಛೆಯಿಂದ ಸನ್ಯಾಸಿ ಮುನಿ ಮಹಾರಾಜರ ಹತ್ತಿರದಿಂದ ದೀಕ್ಷೆಯನ್ನು ಪಡೆದು ವ್ರತಧಾರಿಗಳಾಗಿ ಮರಣವನ್ನು ಹೊಂದುವರು. ಇದೇ ಪದ್ಧತಿಯನ್ನು ಅನುಸರಿಸಿ ಇತ್ತಿಚಿಗೆ ತೇರದಾಳ ಸಮೀಪದ ಭದ್ರಗಿರಿಯಲ್ಲಿ ಸುನಂದಾ ಮಾತಾಜಿಯವರು ಸಮಾಧಿ ಮರಣ ಹೊಂದಿದ್ದು ಈ ವ್ರತಕ್ಕಿರುವ ಮಹತ್ವವನ್ನು ತಿಳಸುತ್ತದೆ. ಈ ರೀತಿಯಾಗಿ ಜೈನ ಪರಂಪರೆ ತೇರದಾಳ ಪ್ರದೇಶದಲ್ಲಿ ಬೆಳೆದುಕೊಂಡು ಬಂದಿದೆ.

**ಪರಾಮರ್ಶನ ಗ್ರಂಥಗಳು**


- ದೇವರಕೊಂಡಾರೆಡ್ಡಿ. (ಸಂ.). (2006). *ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ: 9 ಬಾಗಲಕೋಟೆ ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕುಂಬಾರ ರಮೇಶ. (2019). *ತೇರದಾಳ ಪರಿಸರದ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ.* ಅಪ್ರಕಟಿತ ಪ್ರೌಢಪ್ರಬಂದ, ಕನ್ನಡ ವಿಶ್ವ ವಿದ್ಯಾಲಯ.
- ಮಂಜುನಾಥ, ಎಸ್. ಪಾಟೀಲ. (2020). *ಜಮಖಂಡಿ ತಾಲೂಕಿನ ಇತಿಹಾಸ ಮತ್ತು ಪುರಾತತ್ವ.* ಅಕ್ಷರ ಮಂಟಪ.
- ನಾಗರಾಜ, ಕೆ. ನವಲಗುಂದ. (2016). *ಉತ್ತರ ಕರ್ನಾಟಕದ ಜೈನ ವಾಡೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸಂಗಮೇಶ ಕಲ್ಯಾಣಿ. (2017). *ತೇರಿದಾಳ–12.* ಜ್ಞಾನಭಾರತಿ ತ್ರಿವೇಣಿ ಪ್ರಕಾಶನ.